ಅ) 'ಎ' ವೃಂದ - 10
'ಬಿ' ವೃಂದ - 89
'ಸಿ' ವೃಂದ - 606
'ಡಿ' ವೃಂದ - 160

ಇ) ಇಲಾಖೆವಾರು ಮಾಹಿತಿ ತಕ್ಷಣವೆ ಲಭ್ಯವಿಲ್ಲ. ಒಟ್ಟು 535 ಜನರನ್ನು ಭರ್ತಿ ಮಾಡಿದೆ. ಈ ನೇಮಕಾತಿಯನ್ನು ವಿಶೇಷ ಪ್ರಯತ್ನದ ಮೂಲಕ ಸಂಬಂಧಿಸಿದ ಆಯ್ಕೆ ಪ್ರಾಧಿಕಾರಗಳ ಮುಖಾಂತರ ಮಾಡಿದೆ.

ಈ) ಶ್ರೇಪ್ರ ಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆಗಾಗಿ ಆಯ್ಕೆ ಪ್ರಧಿಕಾರ ಪ್ರಕಟಣೆ ಹೊರಡಿಸಿದೆ. ಇತರೆ ಹುದ್ದೆಗಳ ಭರ್ತಿಗಾಗಿ ಸರ್ಕಾರ ಸಂಬಂಧಪಟ್ಟವರಿಗೆ ಸೂಚನೆ ನೀಡಿದೆ. ಈ ನೇಮಕಾತಿಗಳಿಗೆ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವುದು ಸಂವಿಧಾನಬದ್ದವಾಗುಲಾರದು.

**ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯ ಅಭಿವೃದ್ಧಿ**

730 - ಶ್ರೀ ಕುಂಬ್ಳೆ ಸುಂದರರಾವ್( ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿರ್ಮಿಸಿ ಎಷ್ಟು ವರ್ಷಗಳಾದವು?*

*ಆ) ಅಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ನಿವಾಸಿಗಳಿಗೆ ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ, ಈ ಬಗ್ಗೆ ಕೂಡಲೇ ಸರ್ಕಾರದವರು ಕ್ರಮ ಕೈಗೊಳ್ಳುವರೆ?*

*ಈ) ಸದರಿ ಬಡಾವಣೆಯನ್ನು ಬೆಂಗಳೂರು ನಗರ ಪಾಲಿಕೆಗೆ ಹಸ್ತಾಂತರಿಸಲು ಸರ್ಕಾರದವರು ಪರಿಶೀಲಿಸುವರೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):

ಅ) ಕುಮಾರಸ್ವಾಮಿ ಬಡಾವಣೆಯ ಮೊದಲನೇ ಹಂತವು1985 ರಲ್ಲೂ ಹಾಗೂ ಎರಡನೇ ಹಂತವು 1990 ರಲ್ಲಿ ನಿರ್ಮಿಸಲಾಗಿದೆ.

ಆ) ಹೌದು. ಕುಮಾರಸ್ವಾಮಿ ಬಡಾವಣೆಯ 2ನೇ ಹಂತದಲ್ಲಿ ಇತ್ತೀಚೆಗೆ ನಿರ್ಮಾಣವಾದ ನಿವೇಶನಗಳ ಪ್ರದೇಶದ ಬಿಟ್ಟು ಹೋದ ಭಾಗಗಳಲ್ಲಿ ಮಾತ್ರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುತ್ತದೆ. ಎರಡನೇ ಹಂತದ ಸ್ವಲ್ಪ ಭಾಗದಲ್ಲಿ ನ್ಯಾಯಾಲಯದಲ್ಲಿಯ ದಾವೆಗಳಿಂದಾಗಿ ತಡೆ ಉಂಟಾಗಿದ್ದು ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ಇ) ಹೌದು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಕುಮಾರಸ್ವಾಮಿ ಒಂದನೇ ಹಂತದ ಬಡಾವಣೆಗೆ ಎಲ್ಲಾ ರೀತಿಯ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಈ ಬಡವಣೆಯು ಮಹಾನಗರಪಾಲಿಕೆಗೆ ವರ್ಗಾವಣೆ ಮಾಡಲು ಸಿದ್ದವಾಗಿರುತ್ತದೆ. ಕುಮಾರಸ್ವಾಮಿ ಬಡಾವಣೆಯ 2ನೇ ಹಂತದ ಬಿಟ್ಟು ಹೋದ ಭಾಗಗಳಿಗೆ ಮೂಲಭೂತ ಸೌಕರ್ಯಗಳ ಉಳಿಕೆ ಕೆಲಸ ಮುಗಿಸಿದ ನಂತರ ಮಹಾನಗರ ಪಾಲಿಕೆಗೆ ವಹಿಸಿಕೊಡಲು ಪರಿಶೀಲಿಸಲಾಗುವುದು.